



ಜಪಾನ್‌ನಲ್ಲಿ ಸಕುರಾ ಹೂಗಳ ನಡುವೆ ಲೇಖಕಿ

ಹೂಗಳು ಮೋಹಕಲೋಕವನ್ನೇ ಸೃಷ್ಟಿಸಿಬಿಡುತ್ತವೆ. ಈ ಚೆರ್ರಿ ಬ್ಲಾಸಂ ಹೂಗಳನ್ನು ಜಪಾನಿ ಭಾಷೆಯಲ್ಲಿ 'ಸಕುರಾ' ಎನ್ನುತ್ತಾರೆ. ಈ ಹೂವುಗಳು ಅರಳುವುದನ್ನು ಇಲ್ಲಿ ಹೊಸ ಹುಟ್ಟಿನಂತೆಯೇ ಸಂಭ್ರಮಿಸಲಾಗುತ್ತದೆ. ಹೂ ಅರಳಿ ನಳನಳಿಸುವ ಕಾಲವನ್ನು ಉತ್ಸವದಂತೆ ಆಚರಿಸಲಾಗುತ್ತದೆ.

'ಸಕುರಾ ಮತ್ಸುರಿ' ಎಂದು ಕರೆಯುವ ಚೆರ್ರಿ ಬ್ಲಾಸಂ ಫೆಸ್ಟಿವಲ್ ಅರ್ಥಾತ್ ಹೂಗಳ ಉತ್ಸವವನ್ನು ವರ್ಷವರ್ಷವೂ ನಡೆಸಲಾಗುತ್ತದೆ. ಪ್ರತಿವರ್ಷ ಚೆರ್ರಿ ಬ್ಲಾಸಂ ನಗು ಚೆಲ್ಲುವುದನ್ನು ನೋಡಲೆಂದೇ ವಿಶ್ವದಾದ್ಯಂತ ಲಕ್ಷಲಕ್ಷ ಪ್ರವಾಸಿಗರು ಟೋಕಿಯೊಗೆ, ಜಪಾನಿನ ಮತ್ತಿತರ ಕಡೆಗೆ ಧಾವಿಸಿ ಬರುತ್ತಾರೆ. ಮಾರ್ಚ್‌ನಿಂದ ಮೇ ತನಕ ಸೌಂದರ್ಯಲೋಕ ಸೃಷ್ಟಿಸುವ ಈ ಹೂಗಳ ಹಬ್ಬವನ್ನು ಒಮ್ಮೆಯಾದರೂ ನೋಡಬೇಕೆಂಬ ಹಂಬಲದೊಂದಿಗೆ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆಯೇ ಹೆಚ್ಚು. ಈ ಹೂ ಹಬ್ಬ ಜಪಾನಿನ ಪ್ರವಾಸೋದ್ಯಮವನ್ನು ದೊಡ್ಡ ಮಟ್ಟದಲ್ಲಿ ಉತ್ತೇಜಿಸಿದೆ ಕೂಡ.

ಜಪಾನಿನಲ್ಲಿ ಚೆರ್ರಿ ಮರಗಳು ಜನವರಿ ತಿಂಗಳಿನಲ್ಲಿಯೇ ಹೂ ತೊಡತೊಡಗುತ್ತವೆ. ಮಾರ್ಚ್ ತಿಂಗಳ ಹೊತ್ತಿಗೆ ಟೋಕಿಯೊ, ಒಕಿನೊವೊ, ಕ್ಯೋಟೊದ ಕಾಡುಗಳಲ್ಲಿ, ಉದ್ಯಾನಗಳಲ್ಲಿ, ಬೀದಿ ಬದಿಗಳಲ್ಲಿ, ನದಿ ದಡಗಳಲ್ಲಿ ಸುಂದರವಾಗಿ ಬಿರಿದುನಿಲ್ಲುತ್ತವೆ. ಈ ದಿಂಡು ಹೂಗಳನ್ನು ನೋಡುವುದೇ ಕಣ್ಣಿಗೊಂದು ಹಬ್ಬ.

ಚೆರ್ರಿ ಹಣ್ಣು ಈ ಮರಗಳದ್ದೇ ಆದರೂ ಹಣ್ಣುಗಳಿಗಾಗಿ ಬೆಳೆಸುವ ಹಾಗೂ ಹೂಗಳಿಗೆಂದೇ ಒತ್ತೊತ್ತಾಗಿ ಬೆಳೆಸುವ ಮರಗಳೇ ಬೇರೆ ಬೇರೆ ಪ್ರಭೇದವಂತೆ.

ಈ ಸುಂದರ 'ಸಕುರಾ ಉತ್ಸವ' ಯಾವಾಗ, ಹೇಗೆ ಆಚರಣೆಗೆ ಬಂತು ಎನ್ನುವುದಕ್ಕೆ ಪುಟ್ಟದೊಂದು ಇತಿಹಾಸವಿದೆ. ರಾಜರ ಆಳ್ವಿಕೆ ಕಾಲದಲ್ಲಿ ರಾಜರು ಪುಟ್ಟ ಸಭೆ ಸಮಾರಂಭ ನಡೆಸಲು ಆರಿಸಿಕೊಳ್ಳುತ್ತಿದ್ದುದು ಚೆರ್ರಿ ಹೂಗಳ ಸೊಗಸಾದ ತೋಟಗಳನ್ನು. ತಮ್ಮ ಬಿಡುವನ್ನು ಕಳೆಯಲು ಈ ತೋಟಗಳೇ ಅವರಿಗೆ ಬೇಕಿತ್ತಂತೆ. ಕಾಲ ಕಳೆದಂತೆ, ರಾಜರ ತೋಟಗಳಲ್ಲಿ ಮಾತ್ರ ನಡೆಯುತ್ತಿದ್ದ ಆಚರಣೆ ಜನರನ್ನೂ ಸೆಳೆಯಿತು. ಇದೀಗ ಈ ಹಬ್ಬ ಜಪಾನಿನ ತುಂಬ ನಡೆಯುತ್ತಿದೆ, ಜಪಾನ್‌ನ ಹೆಗ್ಗುರುತೂ ಆಗಿಹೋಗಿದೆ.

ಚೆರ್ರಿ ಬ್ಲಾಸಂ ಸಮಯದಲ್ಲಿ ಜಪಾನಿನಾದ್ಯಂತ ಅರಳಿದ ಹೂಗಳ ನಡುವೆ ಹೂ ಉದ್ಯಾನಗಳಲ್ಲಿ ಪರಿವಾರದೊಂದಿಗೆ ಬಂದು ಊಟ ತಿಂಡಿ ತಿನ್ನುತ್ತಾ, ಆಟಗಳನ್ನು ಆಡುತ್ತಾ, ಹರಟೆ ಹೊಡೆಯುತ್ತಾ ಜನರು ಸಂತಸ ಕಾಣುತ್ತಾರೆ. ಪ್ರಕೃತಿಯ ಮಡಿಲಲ್ಲಿ ಒಂದಷ್ಟು ಸಮಯ ಕಳೆದು ಹೋಗುತ್ತಾರೆ.

## ಸುಂದರ ಹೂವಿನ ನಶ್ವರತೆಯ ತತ್ವ

ಸೌಂದರ್ಯವೇ ಮೈವೆತ್ತಂತೆ ಹುಟ್ಟಿ, ಅಷ್ಟೇ ಬೇಗ ಮಾಯವಾಗಿಬಿಡುವ ಚೆರ್ರಿಹೂಗಳು ಜಪಾನಿಯರ ಪಾಲಿಗೆ ಸಿದ್ಧಾಂತವೂ ಹೌದು. ಜೀವನದ ನಶ್ವರತೆಯನ್ನು ಸೂಚಿಸುವ ಈ ಹೂಗಳನ್ನು ತಮ್ಮ ಬದುಕಿಗೂ ತತ್ವವಾಗಿಸಿಕೊಂಡಿದ್ದಾರೆ ಇವರು.

ಈ ಹೂವುಗಳು 15ರಿಂದ 20 ದಿನಗಳ ಕಾಲ ಬದುಕಬಲ್ಲವು. ಉತ್ತಮ ಹವಾಗುಣವಿದ್ದರೆ